III	ಸಾಗರ ಸೊರಬ ನಗರ	ಸಾಗರದಲ್ಲಿರುವ ಅಸಿಸ್ಟೆಂಟ್ ಕಮಿಷನರು.

ಕಡೂರು ಡಿಸ್ಟ್ರಿಕ್ಟ್.

I	ಚಿಕ್ಕಮಗಳೂರು ಮೂಡಗೆರೆ	ಡೆಪ್ಯುಟಿ ಕಮಿಷನರು.
II	ಕಡೂರು ತರಿಕೆರೆ ಕೊಪ್ಪ ಯಡೆಹಳ್ಳಿ ಸಬ್ ತಾಲ್ಲೂಕು	ಚಿಕ್ಕಮಗಳೂರಲ್ಲಿರುವ ಅಸಿಸ್ಟೆಂಟ್ ಕಮಿಷನರು.

ಚಿತ್ರದುರ್ಗ ಡಿಸ್ಟ್ರಿಕ್ಟ್.

I	ಹಿರಿಯೂರು	ಡೆಪ್ಯುಟಿ ಕಮಿಷನರು.
II	ದಾವಣಗೆರೆ ಹರಿಹರ ಸಬ್ ತಾಲ್ಲೂಕು ಹೊಳಲ್ಕೆರೆ ಹೊಸದುರ್ಗ ಜಗಲೂರು	ದಾವಣಗೆರೆಯಲ್ಲಿರುವ ಅಸಿಸ್ಟೆಂಟ್ ಕಮಿಷನರು.
III	ಜಳ್ಳಕೆರೆ ಮೊಳಕಾಲ್ಮೂರು ಚಿತ್ರದುರ್ಗ	ಚಿತ್ರದುರ್ಗದಲ್ಲಿರುವ ಅಸಿಸ್ಟೆಂಟ್ ಕಮಿಷನರು.

ತಾರೀಖು 10ನೆ ಡಿಸೆಂಬರ್ 1906.

ನಂ. ಆರ್. 5854—ಎಲ್. ಆರ್. 173-06—2, ಸಂ 1888ನೆ ಇಸವಿಯ ಲ್ಯಾಂಡ್ ರೆವಿನ್ಯೂ ಕೋಡಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮಂತ ಮಹಾರಾಜರವರ ಸರ್ಕಾರದವರು, 1901ನೆ ಇಸವಿ ಜುಲೈ 10ನೆ ತಾರೀಖಿನ 264—ಆರ್. 122ನೆ ನಂಬರಿನ ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಲ್ಪಟ್ಟ ಸದರಿ ಕೋಡಿನ ನಿಬಂಧನೆಗಳಲ್ಲಿ ಈ ಕೆಳಗೆ ನಮೂದಾಗುವ ತಿದ್ದುಪಾಟುಗಳನ್ನು ಮಾಡಲು ಹುಕುಂ ದಯಪಾಲಿಸಿರುತ್ತಾರೆ :—

1. 47ನೆ ನಿಬಂಧನೆಯ (ಬಿ) ಕಲಮನ್ನು ಬಿಟ್ಟು (ಸಿ) ಕಲಮನ್ನು (ಬಿ) ಕಲಮನ್ನಾಗಿ ಬದಲಾಯಿಸಬೇಕು; ಮತ್ತು ಈ ಕಡೆಯಲ್ಲಿ ಹೇಳಲ್ಪಟ್ಟ ಕಲಮಿನಲ್ಲಿ "ಹಿಂದಿನ ಕಲಂನಲ್ಲಿ ವಿವರಿಸಿರುವ ಸ್ವಭಾವದ ಜಮಿನಿನ ಅಥವಾ" ಎಂಬ ಮಾತುಗಳನ್ನು ಬಿಟ್ಟುಬಿಡಬೇಕು.

2. 48ನೆ ನಿಬಂಧನೆಯಲ್ಲಿ "(ಬಿ) ಮತ್ತು (ಸಿ) ಕಲಂಗಳಲ್ಲಿ" ಎಂಬ ಮಾತುಗಳಿಗೂ ಅಕ್ಷರಗಳಿಗೂ ಬದಲಾಗಿ "(ಬಿ) ಕಲಂನಲ್ಲಿ" ಎಂಬ ಮಾತನ್ನೂ ಅಕ್ಷರವನ್ನೂ ಸೇರಿಸಬೇಕು.

3. 49 ಮತ್ತು 50ನೆ ನಿಬಂಧನೆಗಳ ಮಧ್ಯದಲ್ಲಿ ಈ ಕೆಳಗಿನ ನಿಬಂಧನೆಯನ್ನು ಸೇರಿಸಬೇಕು :—

"49 ಎ. ಒಂದು ರೈಲ್ವೆ ಸ್ಟೇಷನಿನ ಹತ್ತಿರ ಮತ್ತು ಅದರಿಂದ ಅರ್ಧ ಮೈಲಿಯೊಳಗೆ ಅಥವಾ ಸರ್ಕಾರದವರು ಆಗಿಂದಾಗ್ಗೆ ಗೊತ್ತುಮಾಡುವಂಥಾ ಫಾಸಲೆಯೊಳಗೆ ಇರುವ ಜಮಿನಿನ ಹಿಡುವಳಿಯನ್ನು, ಸರ್ಕಾರಿ ಕೆಲಸಕ್ಕೆ ಬೇಕಾದಾಗ ಯಾವ ಪ್ರತಿಫಲವನ್ನೂ ಕೊಡದೆ ಸದರಿ ಜಮಿನು ವಾಪಸು ತೆಗೆದುಕೊಳ್ಳಲ್ಪಡಲು ಗುರಿಯಾಗಿರತಕ್ಕದ್ದೆಂಬ ಷರತ್ತಿಗೆ ಒಳಪಟ್ಟು, ಡೆಪ್ಯುಟಿ ಕಮಿಷನರಿಗೆ ಯುಕ್ತತೋರುವಂತೆ, ವ್ಯವಸಾಯದ ಕೆಲಸಗಳಿಗೆ ಕೊಡಬಹುದು; ಆದರೆ ಕಟ್ಟಡ ಕಟ್ಟುವ ಬಗ್ಗೆ ಮಾತ್ರ, ಸರ್ಕಾರದವರ ಪೂರ್ವಾನುಮತಿಯನ್ನು ವಜಾಂದಾಗಿ ಪಡೆದು ಮತ್ತು ಪ್ರತಿ ಸಂದರ್ಭದಲ್ಲಿಯೂ ಅವರ ಹುಕುಂಗಳಿಗೆ ಒಳಪಟ್ಟು ಅಂಥಾ ಜಮಿನು ಕೊಡಲ್ಪಡತಕ್ಕದ್ದು.

ತಾರೀಖು 12ನೆ ಡಿಸೆಂಬರ್ 1906.

ನಂ. ಆರ್. 5927—ಫಾ. 125-05—5, (1900ನೆ ಇಸವಿಯ 11ನೆ) ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳನ್ನನುಸರಿಸಿ, ಮೈಸೂರು ಶ್ರೀಮಂತ ಮಹಾರಾಜರವರ ಸರ್ಕಾರದವರು, 1907ನೆ ಇಸವಿಯ ಜನವರಿ ಗುರ್ತಿನ ತಾರೀಖಿನ ಲಾಗಾಯಿತು, ಈ ಇಸ್ತಿಹಾರ್ನಾಮೆಗೆ ಲಗತ್ತಿರುವ ಷೆಡ್ಯೂಲಿನಲ್ಲಿ ಕಂಡ ಚಿತ್ರದುರ್ಗದಿಯೊಳಗಣ ವಿಸ್ತೀರ್ಣವು,

ಸದರಿ ಇನ್ಸ್ಟಿಹಾರ್ನಾಮೆಯ ಕೆಳಭಾಗದಲ್ಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು, "ಸಂಸ್ಥಾನದ (ಸ್ಟೇಟ್) ಜಂಗಲು" ಎಂದು ಭಾವಿಸಲ್ಪಡತಕ್ಕದ್ದೆಂದು ಪ್ರಕಟಿಸಲು ಹುಕುಂ ದಯಪಾಲಿಸಿರುತ್ತಾರೆ :—

ಷೆಡ್ಯೂಲ್.

ತಿನ್ಸುಕ್ಕು.	ತಾಲ್ಲೂಕು.	ಸುಮಾರು ಎಷ್ಟು ಎಕರೆ.	ಹಾಕಿನ ಹೆಸರು.	ಚತುರ್ಗಡಿ.
ಮೈಸೂರು.	ಶ್ರೀರಂಗಪಟ್ಟಣ.	403 ಎಕರೆಗಳು, 9 ಗುಂಟೆ.	ಕರಿಘಟ್ಟದ ಸಂದಲ್ ಸ್ಯಾಂಟ್ಯೂರ್ಸ್.	ಉತ್ತರಕ್ಕೆ.—ಕುರುಬರಕೆಟ್ಟಹಳ್ಳಿ ಗ್ರಾಮದ ಸರ್ವೆ 135ನೆ ನಂಬರಿನ ಅತ್ಯಂತ ದಕ್ಷಿಣ ಮೂಲೆಯಿಂದ ಹೊರಟು (ಕಳ್ಳಿಕೊಪ್ಪಲು ಗ್ರಾಮದ ಸರ್ವೆ 134ನೆ ನಂಬರು ಮತ್ತು ಕುರುಬರಕೆಟ್ಟಹಳ್ಳಿಗ್ರಾಮದ ಸರ್ವೆ 134 ಮತ್ತು 135ನೆ ನಂಬರುಗಳ ಮುಕ್ಕುಪ್ಪೆ ಬಾಂದುಗಳು) ಎಲೆ ಯ ರೇಖೆಯು ಸರ್ವೆ 134ನೆ ನಂಬರಿಗೆ ಅಡ್ಡಲಾಗಿ ಆಗ್ನೇಯದಿಕ್ಕಿಗೆ ಸುಮಾರು 46 ಸರಪಣಿಗಳ ದೂರ, ಕುರುಬರಕೆಟ್ಟಹಳ್ಳಿ, ಅಲ್ಲಾಪಟ್ಟಣ ಮತ್ತು ಚಿನ್ನಾಯಕನಹಳ್ಳಿ ಗ್ರಾಮಗಳ ಮುಕುಪ್ಪೆಬಾಂದುಗಳಿಗೆ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ಅಲ್ಲಾಪಟ್ಟಣಗ್ರಾಮದ ಪಶ್ಚಿಮ ಮೇರೆಯಲ್ಲಿ ಸುಮಾರು 42 ಸರಪಣಿಗಳದೂರ ಹೋಗಿ ಅಲ್ಲಿ ಚಿಕ್ಕದೇವರಾಯಸಾಗರ ನಾಲೆಯನ್ನು ಸೇರುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಸದರಿ ನಾಲೆಯ ಎಡಪಾರ್ಶ್ವದಲ್ಲಿ, ಚಿನ್ನಾಯಕನಹಳ್ಳಿ ಗ್ರಾಮದ ಸರ್ವೆ 147ನೆ ನಂಬರಿನ ವಾಯವ್ಯ ಮೂಲೆಯಿಂದ ಪೂರ್ವಕ್ಕೆ ಸುಮಾರು 20 ಸರಪಣಿಗಳ ದೂರದಲ್ಲಿರುವ ಒಂದು ಸ್ಥಳಕ್ಕೆ ಹೋಗುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ಚಿನ್ನಾಯಕನಹಳ್ಳಿ ಗ್ರಾಮದ 147ನೆ ಸರ್ವೆ ನಂಬರಿಗೆ ಅಡ್ಡಲಾಗಿ ಈಶಾನ್ಯದಿಕ್ಕಿಗೆ ಸುಮಾರು 10 ಸರಪಣಿಗಳ ದೂರವೂ, ಕಳ್ಳಿಕೊಪ್ಪಲು ಗ್ರಾಮದ ಸರ್ವೆ 134ನೆ ನಂಬರಿಗೆ ಅಡ್ಡಲಾಗಿ ಸುಮಾರು 10 ಸರಪಣಿಗಳದೂರವೂ ಹೋಗಿ ಅಲ್ಲಿ ಕುರುಬರಕೆಟ್ಟಹಳ್ಳಿಯಿಂದ ಕರಿಘಟ್ಟದ ದೇವಸ್ಥಾನಕ್ಕೆ ಹೋಗುವ ಕಾಲುದಾರಿಯನ್ನು ಸೇರಿ, ಅಲ್ಲಿಂದ 134ನೆ ಸರ್ವೆ ನಂಬರಿಗೆ ಅಡ್ಡಲಾಗಿ ಈಶಾನ್ಯದಿಕ್ಕಿಗೆ ಸುಮಾರು 55 ಸರಪಣಿಗಳ ದೂರ ಹೋಗಿ ಹೊರಟ ಸ್ಥಳವನ್ನು ಕೂಡುತ್ತದೆ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಪ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಸೆಕ್ರಿಟೆರಿ.